## ತಂತ್ರಜ್ಞಾನ

# ಇಂಟೆಲ್ ಕಂಪ್ಯೂಟರ್ ಕ್ಲಬ್‌ಹೌಸ್

ಈವರೆಗೂ ಸರ್ಕಾರಿ ಶಾಲಾ ಮಕ್ಕಳು ಅಥವಾ ಗ್ರಾಮಾಂತರ ಪ್ರದೇಶದಿಂದ ಬಂದ ಮಕ್ಕಳಾಗಲಿ ಇಲ್ಲವೇ ಬಡ ಕುಟುಂಬದಿಂದ ಬಂದವರಾಗಲಿ ಕಂಪ್ಯೂಟರ್ ಬಳಕೆ ಒಂದು ಕನಸಿನ ಮಾತಾಗಿತ್ತು. ಕಂಪ್ಯೂಟರ್ ಕಲಿಕೆಗೆ ಹೆಚ್ಚು ಹಣ ತೆರಬೇಕಾಗುತ್ತದೆ ಎಂಬ ಕಾರಣಕ್ಕಾಗಿಯೇ ಕಂಪ್ಯೂಟರ್ ಕಲಿಕೆಯಿಂದ ದೂರವಿರುತ್ತಿದ್ದರು. ಅವರ ಸುಪ್ತ ಪ್ರತಿಭೆಯು ಅಲ್ಲಿಯೇ ಕಮರಿ ಹೋಗುತ್ತಿತ್ತು. ಆದರೆ ಈಗ ಅವರ ಪ್ರತಿಭೆ ಅರಳಲು ಇಂಟೆಲ್ ಇಂಡಿಯ ನೆರವಿಗೆ ಬಂದಿದೆ.

ಕಂಪ್ಯೂಟರ್ ಮೂಲಕ ಡಿಜಿಟಲ್ ಕಲೆ, ಕಿರುಚಿತ್ರಗಳ ನಿರ್ಮಾಣ ಮತ್ತು ಸಂಕಲನ, ನೈಪುಣ್ಯತೆ ಕಲಿಕೆ ಮುಂತಾದ ಕೌಶಲ್ಯಗಳನ್ನು ಬೆಂಗಳೂರು ನಗರದ ಸಮೀಪ ಜಕ್ಕೂರು ಗ್ರಾಮದ ಸರ್ಕಾರಿ ಶಾಲಾ ಮಕ್ಕಳಿಗಾಗಿ ಚಿಲ್ಡ್ರನ್ಸ್ ಲವ್‌ಕ್ಯಾಸೆಲ್ಸ್‌ನಲ್ಲಿ ಇಂಟೆಲ್ ಕಂಪ್ಯೂಟರ್ ಕ್ಲಬ್‌ಹೌಸ್ ನೆರವಿನಿಂದ ಕಂಪ್ಯೂಟರ್ ತರಬೇತಿ ಯನ್ನು ಕಳೆದ ವಾರ ಪ್ರಾರಂಭಿಸಿತು.



ಇಂಟೆಲ್ ಕಂಪ್ಯೂಟರ್ ಕ್ಲಬ್‌ಹೌಸ್ ಆರಂಭಿಸಿರುವ ತರಬೇತಿ ಕೇಂದ್ರದಲ್ಲಿ ಗಣಕಯಂತ್ರದ ಬಗ್ಗೆ ಮಾಹಿತಿ ಪಡೆಯುತ್ತಿರುವ ವಿದ್ಯಾರ್ಥಿಗಳು

ಈ ಕಂಪ್ಯೂಟರ್ ತರಬೇತಿ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲ್ ಉದ್ಘಾಟಿಸಿದರು.

'ಕರ್ನಾಟಕ ರಾಜ್ಯವು ಮಾಹಿತಿ ತಂತ್ರಜ್ಞಾನ ರಂಗದಲ್ಲಿ ಸಾಕಷ್ಟು ಮುನ್ನಡೆ ಸಾಧಿಸಿದ್ದರೂ ಸಹ ರಾಜ್ಯದಲ್ಲಿ 'ಕೇವಲ ಶೇ 5 ರಷ್ಟು ಜನಸಂಖ್ಯೆ ಮಾತ್ರ ಕಂಪ್ಯೂಟರ್ ಬಳಕೆ ಮಾಡುತ್ತಿದ್ದಾರೆ. ಇನ್ನುಳಿದ ಶೇ 95 ಜನಸಂಖ್ಯೆಗೆ ಕಂಪ್ಯೂಟರ್ ಬಗ್ಗೆ ಅರಿವು ಇಲ್ಲ. ಈ ಹಿನ್ನೆಲೆಯಲ್ಲಿ ಜನರಲ್ಲಿ ಕಂಪ್ಯೂಟರ್ ಸಾಕ್ಷರತೆ ಹೆಚ್ಚಿಸಲು ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬರಬೇಕು ಎಂದು ಪಾಟೀಲ್ ಕಿವಿಮಾತು ನುಡಿದರು.

ರಾಜ್ಯದ ಕೆಲವು ಹಿಂದುಳಿದ ಜಿಲ್ಲೆಗಳ ಗ್ರಾಮೀಣ ಜನತೆಗೆ ಈಗಲೂ ಕಂಪ್ಯೂಟರ್ ಬಗ್ಗೆ ಅ, ಆ, ಇ ಗೊತ್ತಿಲ್ಲ. ಈ ನಿಟ್ಟಿನಲ್ಲಿ ತೀರಾ ಹಿಂದುಳಿದ ಪ್ರದೇಶಗಳಗೆ ಕಂಪ್ಯೂಟರ್ ತರಬೇತಿ ಹಮ್ಮಿಕೊಳ್ಳುವುದು ಅವಶ್ಯಕವಾಗಿದೆ ಎಂಬ ಅವರ ಮಾತು ವಾಸ್ತವದಲ್ಲಿ ಹೆಚ್ಚು ರಚನಾತ್ಮಕವಾಗಿ ಜಾರಿಗೆ ಬರಬೇಕಾಗಿದೆ.

ಚಿಲ್ಡ್ರನ್ ಲವ್‌ಕ್ಯಾಸೆಲ್ಸ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಭಾಗ್ಯ ರಂಗಚಾರ್ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಈ ಇಂಟೆಲ್ ಕಂಪ್ಯೂಟರ್ ಕ್ಲಬ್‌ಹೌಸ್‌ನಲ್ಲಿ ಶಾಲಾ ಅವಧಿ ನಂತರ 8-18 ವರ್ಷದ ಮಕ್ಕಳಿಗೆ ಕಂಪ್ಯೂಟರ್ ತರಬೇತಿ ಹಮ್ಮಿಕೊಂಡಿದೆ. 10 ರಾಷ್ಟ್ರಗಳಲ್ಲಿ 65 ಕಡೆ ಇಂಟೆಲ್ ಕಂಪ್ಯೂಟರ್ ಕ್ಲಬ್‌ಹೌಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಇಂತಹ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಹಣ ದೋಚಿಕೊಳ್ಳಲು ನಾಯಿ ಕೊಡೆಗಳಂತೆ ತಲೆ ಎತ್ತಿರುವ ಕಂಪ್ಯೂಟರ್ ಅಕಾಡೆಮಿಗಳು, ಕಲಿಕಾ ಕೇಂದ್ರಗಳು ಸರ್ಕಾರದ ಜೊತೆ ಸೇರಿಕೊಂಡು ಈ ಬಗೆಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡರೆ ರಾಜ್ಯದ ಜನತೆಯ ಕಂಪ್ಯೂಟರ್ ಸಾಕ್ಷರತೆ ಪ್ರಮಾಣ ಹೆಚ್ಚುವುದರಲ್ಲಿ ಅದರಿಂದ ಒಟ್ಟಾರೆ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಉದ್ದಿಮೆಗೆ ಪ್ರತ್ಯಕ್ಷ ಇಲ್ಲವೇ ಪರೋಕ್ಷ ರೀತಿಯ ನೆರವು ದೊರೆಯುವುದರಲ್ಲಿ ಸಂದೇಹವೇ ಇಲ್ಲ.